ಉಪಾಧ್ಯಕ್ಷರು.—ನಿಮ್ಮ ಸ್ನೇಹಿತ ಸದಸ್ಯರಿಗೂ ತೊಂದರೆಯಾಗುತ್ತಿದೆ. ಅವರ ಕೊಶ್ಚನ್ಸ್ ಮಿಸ್ ಆಗುತ್ತಿದೆ. ನೀವು ಸಹಕಾರ ಮಾಡದಿದ್ದರೆ ಅವರಿಗೆ ತೊಂದರೆಯಾಗುತ್ತದೆ. ದಯವಿಟ್ಟು ಸಹಕರಿಸಿ. ಪ್ರಶ್ನೆ ಕೇಳಿ ; ಭಾಷಣ ಮಾಡಬೇಡಿ.

ಶ್ರೀ ಬಸವರಾಜ್ ಪಾಟೀಲ್.—ನನಗೆ ತೊಂದರೆ ಇರುವುದರಿಂದ ಕೇಳುತ್ತಿದ್ದೇನೆ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಉಪಾಧ್ಯಕ್ಷರೇ, 1978 ರಲ್ಲಿ ಬಸ್ ನಿಲ್ದಾಣವನ್ನು ವಿಸ್ತರಿಸಿರುವುದರಿಂದ ಈ ಕೂಡಲೇ ಅದನ್ನು ವಿಸ್ತರಿಸತಕ್ಕಂಥ ಯೋಚನೆ ನಮ್ಮ ಪರಿಶೀಲನೆಯಲ್ಲಿ ಇಲ್ಲ. ಅಂಥಾದ್ದು ಏನಾದರೂ ಇದ್ದ ಪಕ್ಷದಲ್ಲಿ ಖಂಡಿತ ನಾನು ಪರಿಶೀಲನೆ ಮಾಡುತ್ತೇನೆ. ಈ ಸಂಧರ್ಭದಲ್ಲಿ ಮಾನ್ಯ ಸದಸ್ಯರೂ ಕೂಡ ಹಣಕಾಸಿನ ಮುಗ್ಗಟ್ಟನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ.

ಪ್ರಶ್ನೆ : 131

ಶ್ರೀ ಧನಂಜಯ ಕುಮಾರ.—ಮಾನ್ಯ ಉಪಾಧ್ಯಕ್ಷರೇ

ಶ್ರೀ ಎಂ. ರಘುಪತಿ.—ಮಾನ್ಯ ಉಪಾಧ್ಯಕ್ಷರೇ, ಈ 131ನೇ ಪ್ರಶ್ನೆಯ ವಿಚಾರದಲ್ಲಿ ಸರಿಯಾದ ಮಾಹಿತಿ ಬಂದಿಲ್ಲ. ಸರಿಯಾದ ಮಾಹಿತಿ ಇಲ್ಲದೇ ಇರುವುದರಿಂದ ಈ ಪ್ರಶ್ನೆಗೆ ಉತ್ತರಿಸುವುದು ಒಳ್ಳೆಯದಲ್ಲ ಆದ್ದರಿಂದ ಇದನ್ನು ತಾವು ತಡೆಹಿಡಿಯಬೇಕು ಎಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಪ್ರಶ್ನೆ 131ನ್ನು ತಡೆಹಿಡಿಯಲಾಗಿದೆ.

ಬಳ್ಳಾರಿ ಜಿಲ್ಲೆಗೆ ಸಾರಿಗೆ ಸೌಲಭ್ಯ ಒದಗಿಸುವ ಬಗ್ಗೆ

132 ಶ್ರೀ ಹೆಚ್. ನಾಗನಗೌಡ (ಕುರುಗೋಡು).—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸುವರೆ :—

ಅ) ರಾಜ್ಯದಲ್ಲಿ ಕೆಲವು ಮಾರ್ಗಗಳ ರಾಷ್ಟ್ರೀಕರಣವನ್ನು ತೆಗೆದು ಹಾಕುವ ಪ್ರಸ್ತಾಪನೆ ಸರ್ಕಾರದ ಮುಂದಿದೆಯೇ ?

ಆ) ಬಳ್ಳಾರಿ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಸಾರಿಗೆ ಸೌಲಭ್ಯ ಒದಗಿಸದೇ ಇರುವ ಹಳ್ಳಿಗಳ ಸಂಖ್ಯೆ ಎಷ್ಟು ?

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು).—ಅ) ಇಲ್ಲಾ

ಆ) 122

ಶ್ರೀ ಹೆಚ್. ನಾಗನಗೌಡ.—ಈಗ ಮಾನ್ಯ ಮಂತ್ರಿಗಳು ಕೆಲವು ಮಾರ್ಗಗಳ ರಾಷ್ಟ್ರೀಕರಣವನ್ನು ತೆಗೆದು ಹಾಕುವ ಬಗ್ಗೆ ಸರ್ಕಾರ ಯಾವ ಆಲೋಚನೆ ಮಾಡಿಲ್ಲ ಎಂದು ಹೇಳಿದರು. ಇದರ ಬಗ್ಗೆ ರಿಪೋರ್ಟ್ ಕಾಲ್‌ಫಾರ್ ಮಾಡಿದರು ಅದರ ಬಗ್ಗೆ ತಮ್ಮದೇನಾದರೂ ಅಭಿಪ್ರಾಯ ಇದೆಯೇ ?

ಶ್ರೀ ಎಂ. ಪಿ. ಪ್ರಕಾಶ್.—ಸರ್ಕಾರದ ಮುಂದೆ ಈ ರಾಷ್ಟ್ರೀಕರಣವನ್ನು ತೆಗೆದುಹಾಕುವಂಥ ಪ್ರಸ್ತಾಪ ಇಲ್ಲ. ಆ ಬಗ್ಗೆ ನಾವು ಯೋಚನೆ ಮಾಡುತ್ತಾ ಇಲ್ಲ.

ಶ್ರೀ ಹೆಚ್. ನಾಗನಗೌಡ.—ಸರ್ಕಾರದ ಕಾರ್ಯಕ್ರಮದ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದ್ದರು. ಮೊದಲನೆಯದು ಕೆ. ಎಸ್. ಆರ್. ಟಿ. ಸಿ. ಯಲ್ಲಿ ಏನು ನಷ್ಟವಾಗುತ್ತಿದೆ ಅದನ್ನು ಕಡಿಮೆ ಮಾಡುವುದು. ಎರಡನೆಯದು, ಜನರಿಗೆ ಸೌಕರ್ಯಗಳನ್ನು ಒದಗಿಸುವುದು. ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಯವರೇ ಆದ್ದರಿಂದ ಅವರಿಗೆ ಗೊತ್ತಿದೆ. ಕುಸುರಿ ಲಗ್ಸುರಿ ಬಸ್‌ನವರು ಕೇವಲ 25 ರೂಪಾಯಿಗೆ ಅಲ್ಲಿಂದ ಬೆಂಗಳೂರಿಗೆ ತಲುಪಿಸುತ್ತಾರೆ, ಸರ್ಕಾರಿ ಬಸ್‌ನಲ್ಲಿ 38 ರೂಪಾಯಿ ತೆಗೆದುಕೊಳ್ಳುತ್ತಾರೆ. ಆದ್ದರಿಂದ ಇದನ್ನು ತೆಗೆದುಹಾಕದೇ ಇರುವುದರ ಬಗ್ಗೆ ಸರ್ಕಾರದವರು ಯಾವುದಾದರೂ ಸಿದ್ಧಾಂತಕ್ಕೆ ಗಂಟು ಬಿದ್ದಿದ್ದೀರಾ, ಇದನ್ನು ತೆಗೆದು ಹಾಕಿದರೆ ಸರ್ಕಾರಕ್ಕೆ ವೆಚ್ಚ ಕಡಿಮೆಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ಏಕೆ ಆಲೋಚನೆ ಮಾಡಬಾರದು ?

ಶ್ರೀ ಎಂ.ಪಿ. ಪ್ರಕಾಶ್.—ಮಾನ್ಯ ಉಪಾಧ್ಯಕ್ಷರೇ, ಪ್ರಾಯಶ: ಸರ್ಕಾರದ ವ್ಯವಸ್ಥೆಯಲ್ಲಿ ಯಾವುದೇ ಋಣ ಕೇಂದ್ರೀಕೃತವಾಗಬಾರದು ಎನ್ನುವುದನ್ನು ಮಾನ್ಯ ಮಿತ್ರರೂ ಕೂಡ ಒಪ್ಪುತ್ತಾರೆಂದು ತಿಳಿದುಕೊಂಡಿದ್ದೇನೆ. ರಾಷ್ಟ್ರೀಕರಣ ದೊಡ್ಡ ಮಾರ್ಗ. ಅನುಷ್ಠಾನದಲ್ಲಿ ತರುವಾಗ ಸ್ವಲ್ಪ ಭ್ರಷ್ಟಾಚಾರ ಆಗಿರಬಹುದು. ಅದು ಈ ಪ್ರಶ್ನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ, ಬೇರೆ ಪ್ರಶ್ನೆ ಹಾಕಿದರೆ ಸಮಂಜಸವಾದ ಉತ್ತರ ಕೊಡುತ್ತೇನೆ.

ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಜನರ ವಸತಿ ಗೃಹಗಳ ನಿರ್ಮಾಣದ ಬಗ್ಗೆ

133 ಶ್ರೀ ಎಸ್. ಜಿ. ನಾಯಕ್ (ಮೊಳಕಾಲ್ಮೂರು).—ಮಾನ್ಯ ಕಾನೂನು, ಸಂಸದೀಯ ವ್ಯವಹಾರ ಮತ್ತು ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೆ :—

ಅ) ಈವರೆವಿಗೆ ಎಷ್ಟು ಜನತಾ ಮನೆಗಳನ್ನು ಹೊಳಕಾಲ್ಮೂರು ತಾಲ್ಲೂಕಿನಲ್ಲಿ ಕಟ್ಟಲಾಗಿದೆ ?

ಆ) ಈ ಪೈಕಿ ಬಿದ್ದು ಹೋಗಿರುವ ಮನೆಗಳೆಷ್ಟು : —

ಇ) ಕಳೆದ ವರ್ಷಗಳಲ್ಲಿ ಕಟ್ಟಿದ ಮನೆಗಳ ಗುಣಮಟ್ಟವು ನಿರ್ಧರಿತ ಗುಣಮಟ್ಟಕ್ಕಿಂತ ಕಡಿಮೆಇತ್ತೆ ;

ಈ) ಹಾಗಿದ್ದಲ್ಲಿ ಇದಕ್ಕೆ ಹೊಣೆ ಯಾರು ಹಾಗೂ ಅವರುಗಳ ಬಗೆ ತೆಗೆದುಕೊಂಡ ಕ್ರಮವೇನು,

ಉ) ಸರ್ಕಾರದಿಂದ ಕಟ್ಟಲ್ಪಟ್ಟು ಅವುಗಳ ಪೈಕಿ ಇನ್ನೂ ವಾಸಕ್ಕೆ ಉಪಯೋಗಿಸಲ್ಪಡದೆ ಇರುವ ಮನೆಗಳ ಸಂಖ್ಯೆ ಎಷ್ಟು ? ಹಾಗೂ ಇದಕ್ಕೆ ಕಾರಣಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮಂತ್ರಿಗಳು).—

ಅ) 1973 ಮನೆಗಳು

ಆ) 23 ಮನೆಗಳು

ಇ) ಹೌದು

ಈ) ಇದಕ್ಕೆ ಹೊಣೆಯಾದವರ ಹೆಸರುಗಳು ಈ ಕೆಳಕಂಡಂತಿವೆ.

	ವರ್ಷ	ಬಿದ್ದು ಹೋದ ಮನೆಗಳ ಸಂಖ್ಯೆ	ಕ್ಷೇತ್ರಾಭಿವೃದ್ಧಿ ಅಧಿಕಾರಿಯ ಹೆಸರು	ಕಿರಿಯ ಅಭಿಯಂತರ ಹೆಸರು
1.	1974-75	3	ಶ್ರೀ ಬಿ. ಭರಮಯ್ಯ	ಶ್ರೀ ಕೆ. ಬಿ. ಕೃಷ್ಣ ಶೆಟ್ಟಿ
2.	1975-76	5	ಶ್ರೀ ಬಿ. ಭರಮಯ್ಯ	ಶ್ರೀ ಕೆ. ಬಿ. ಕೃಷ್ಣ ಶೆಟ್ಟಿ
3.	1977-78	12	ಶ್ರೀ ಬಿ ಭರಮಯ್ಯ ಶ್ರೀ ರಂಗೇಗೌಡ	ಶ್ರೀ ಕೆ. ಬಿ ಕೃಷ್ಣಪ್ಪ ಶೆಟ್ಟಿ ಶ್ರೀ ಎ. ಕೆ. ನಾಗಪ್ಪ
4.	1978-79	1	ಶ್ರೀ ರಂಗೇಗೌಡ	ಶ್ರೀ ಎ. ಕೆ. ನಾಗಪ್ಪ
5.	1979-80	2	ಶ್ರೀ ರಂಗೇಗೌಡ	ಶ್ರೀ ಕೆ. ಬಿ. ಕೃಷ್ಣ ಶೆಟ್ಟಿ
	ಒಟ್ಟು	23		

ಶ್ರೀ ಕೃಷ್ಣ ಶೆಟ್ಟಿ, ಕಿರಿಯ ಅಭಿಯಂತರು, ಇವರನ್ನು ಕೆಲಸದಿಂದ ತೆಗೆದುಹಾಕಲಾಗಿದೆ ಮತ್ತು ಉಳಿದವರ ವಿರುದ್ಧ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲು ಕ್ರಮ ತೆಗೆದುಕೊಂಡಿದೆ.

ಉ) ಕರಡಿ ಹಳ್ಳಿಯಲ್ಲಿರುವ 16 ಮನೆಗಳು ಊರಿನ ಸ್ಮಶಾನದ ಪಕ್ಕದಲ್ಲಿ ಕಟ್ಟಿರುವ ಪ್ರಯುಕ್ತ ಅವುಗಳಲ್ಲಿ ಫಲಾನುಭವಿಗಳು ವಾಸಮಾಡುತ್ತಿಲ್ಲ.

ಶ್ರೀ ಎನ್. ಬಿ ನಾಯಕ್.— ಸ್ವಾಮಿ, ತಾವು ಎರಡನೇ ಪ್ರಶ್ನೆಗೆ ಉತ್ತರವಾಗಿ 23 ಮನೆಗಳು ಎಂದು ಹೇಳಿದಿರಿ, ಇದು ಸರಿಯಾಗಿಲ್ಲ. 1981-82 ರಲ್ಲಿ ಎಷ್ಟು ಮನೆಗಳು ಬಿದ್ದಿವೆ ಮತ್ತು ಯಾವ ಯಾವ ಮನೆಗಳು ಎಷ್ಟೆಷ್ಟು ಬಿದ್ದು ಹೋಗಿವೆ ಎನ್ನುವುದನ್ನು ತಿಳಿಸಬೇಕು ?

ಶ್ರೀ ಎ. ಲಕ್ಷ್ಮೀಸಾಗರ್.— ನನ್ನ ಪ್ರಶ್ನೆ 1981-82 ನೇ ವರ್ಷಕ್ಕೆ ಸಂಬಂಧಪಟ್ಟ ಉತ್ತರ ಇಲ್ಲ, ಇದಕ್ಕೆ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುವುದಕ್ಕೆ ಸಿದ್ಧನಿದ್ದೇನೆ. ಆದರೆ ಹಿಂದಿನ ವರ್ಷಗಳ ಮಾಹಿತಿ ನನ್ನ ಪತ್ತಿರ ಇದೆ. 1974-75 ರಲ್ಲಿ 3 ಮನೆಗಳು, 1975-76 ರಲ್ಲಿ 5 ಮನೆಗಳು 1977-78 ರಲ್ಲಿ 12 ಮನೆಗಳು, 1978-79 ರಲ್ಲಿ ಒಂದು ಮನೆ ಮತ್ತು 1979-80 ರಲ್ಲಿ 2 ಮನೆಗಳು — ಒಟ್ಟು 23 ಮನೆಗಳು ಬಿದ್ದು ಹೋಗಿವೆ.

ಶ್ರೀ ಎನ್. ಕೆ. ನಾಯಕ್.— ಸ್ಮಶಾನದಲ್ಲಿ ಮನೆಗಳನ್ನು ಏತಕ್ಕೆ ಕಟ್ಟಿದಿರಿ, ಸ್ಮಶಾನದಲ್ಲಿ ಮನೆಗಳನ್ನು ಕಟ್ಟಬೇಕಾದರೆ ಅವರಿಗೆ ಬುದ್ಧಿ ಇರಲಿಲ್ಲವೇ, ಇದಕ್ಕೆ ಯಾರು ಜವಾಬ್ದಾರರು ?

ಶ್ರೀ ಎ. ಲಕ್ಷ್ಮೀಸಾಗರ್.— ನಾನು ಈಗಾಗಲೇ ಇದಕ್ಕೆ ಉತ್ತರ ಕೊಟ್ಟಿದ್ದೇನೆ. ಶ್ರೀ ಬಿ. ಭರಮಯ್ಯ ಮತ್ತು ಶ್ರೀ ರಂಗೇಗೌಡ ಎಂಬ ಇಬ್ಬರು ಬಿ. ಡಿ. ಒ. ಗಳು ಮತ್ತು ಇನ್ನೊಬ್ಬರು, ಇವರಲ್ಲಿ ಬಿ. ಭರಮಯ್ಯ 3 ಕೇಸುಗಳಲ್ಲಿ ಮತ್ತು ರಂಗೇಗೌಡ 2 ಕೇಸುಗಳಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಇನ್ನೊಬ್ಬರು ಶ್ರೀ ಕೆ. ಬಿ. ಕೃಷ್ಣ ಶೆಟ್ಟಿಯವರನ್ನು ಕೆಲಸದಿಂದ ತೆಗೆದುಹಾಕಲಾಗಿದೆ. ಮತ್ತು ಉಳಿದವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಈಗಾಗಲೇ ಹೇಳಿದ್ದೇನೆ.

ರಾಷ್ಟ್ರೀಕೃತ ಮಾರ್ಗಗಳಲ್ಲಿ ಖಾಸಗಿ ಬಸ್ಸುಗಳು ಓಡಾಡುವ ಬಗ್ಗೆ

134 ಶ್ರೀ ಪಿ. ರಾಮಚಂದ್ರರಾವ್ (ಉಲ್ಲಾಲ್).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—